# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343

ಇ–ಮೇಲ್ ವಿಳಾಸ : director.ahr.kptcl@gmail.com


---

**ವಿಷಯ:** ಕೇಮಾರ್ (ಕಾರ್ಕಳ) 220 ಕೆ.ವಿ. ಉಪಕೇಂದ್ರದ ಆವರಣದಲ್ಲಿ ಮೆಸ್ಕಾಂನ ವಿಭಾಗೀಯ ಉಗ್ರಾಣ ಮತ್ತು ವಸತಿ ಗೃಹಗಳ ನಿರ್ಮಾಣಕ್ಕಾಗಿ ಕವಿಪ್ರನಿನಿ ಜಾಗವನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ.

**ಉಲ್ಲೇಖ:**
1. ಕವಿಪ್ರನಿನಿ/ಬಿ9/4948/04-05 ದಿನಾಂಕ 29/04/2005.
2. ಕವಿಪ್ರನಿನಿ/ಬಿ9/4948/04-05 ದಿನಾಂಕ 26/10/2006.
3. ಕವಿಪ್ರನಿನಿ ಆದೇಶ ಸಂಖ್ಯೆ: ಬಿ7/21354/2021-22 ದಿನಾಂಕ 20/06/2022.
4. ಕವಿಪ್ರನಿನಿ/ಪ್ರವ್ಯತಾ/ಸಿವಿಲ್/(ಬಿ9)/3/2022/ವ್ಯ(ಸ್ಥಿರಾಸ್ಥಿ) (ಇ-24696) ದಿನಾಂಕ 29/11/2022.
5. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಹಾಸನ ರವರ ಪತ್ರ ಸಂಖ್ಯೆ: 23433-35 ದಿನಾಂಕ 07/01/2023.
6. ದಿನಾಂಕ 19/07/2023 ರಂದು ನಡೆದ 140 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆ ನಡವಳಿಗಳು.

**ಪೀಠಿಕೆ:**

1. ಕೇಮಾರ್ (ಕಾರ್ಕಳ) 220 ಕೆ.ವಿ. ಉಪಕೇಂದ್ರದ ಅವರಣದಲ್ಲಿ ಕಾರ್ಕಳ ಹೋಬಳಿ, ನಿಟ್ಟೆ ಹಾಗೂ ಸಾಣೂರು ಗ್ರಾಮಗಳ ಹಲವಾರು ಸರ್ವೆ ಸಂಖ್ಯೆಗಳಲ್ಲಿ ಒಟ್ಟು 29 ಎಕರೆ 11 ಗುಂಟೆ ಜಮೀನು ಕವಿಪ್ರನಿನಿಯ ಒಡೆತನದಲ್ಲಿರುತ್ತದೆ. ಸದರಿ ಜಮೀನುಗಳನ್ನು 1977 ರಿಂದ 1999 ರ ಅವಧಿಯಲ್ಲಿ ಭೂ ಸ್ವಾಧೀನದ ಮೂಲಕ ಪಡೆಯಲಾಗಿದೆ..

2. ಸದರಿ ಆವರಣದಲ್ಲಿ ನಿಗಮದ 220 ಕೆ.ವಿ. ಉಪಕೇಂದ್ರ, ವಸತಿ ಗೃಹಗಳು ಹಾಗೂ ಟಿ.ಎಲ್ ಮತ್ತು ಎಸ್.ಎಸ್ ವಿಭಾಗ ಕಚೇರಿ ಕಟ್ಟಡಗಳನ್ನು ನಿರ್ಮಿಸಲಾಗಿದೆ. ದಿನಾಂಕ 18/04/2022 ರಂದು ನಡೆದ 130 ನೇ ಕವಿಪ್ರನಿನಿ ಮಂಡಳಿ ಸಭೆಯ ನಡವಳಿಯನ್ವಯ ಸದರಿ ಆವರಣದಲ್ಲಿ 1-00 ಎಕರೆ ಜಾಗವನ್ನು ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (ಕವಿಕಾ) ರವರ ವಿತರಣಾ ಪರಿವರ್ತಕಗಳ ತಯಾರಿಕೆ ಮತ್ತು ದುರಸ್ತಿ ಘಟಕವನ್ನು ಸ್ಥಾಪಿಸಲು, ಲೀಸ್ ಆಧಾರದ ಮೇಲೆ ನೀಡಲು ಅನುಮೋದನೆ ನೀಡಲಾಗಿದೆ. ಮುಂದುವರೆದಂತೆ, ಸದರಿ ಆವರಣದಲ್ಲಿ ಕವಿಪ್ರನಿನಿಯ ನೂತನ ಅಥಿತಿ ಗೃಹ ನಿರ್ಮಿಸಲು ಸಹ ಅನುಮೋದನೆ ನೀಡಲಾಗಿದೆ..

3. ಕಾರ್ಕಳದಲ್ಲಿನ ಮೆಸ್ಕಾಂನ 33 ಕೆ.ವಿ. ಉಪಕೇಂದ್ರದನ್ನು 110 ಕೆ.ವಿ. ಉಪಕೇಂದ್ರವನ್ನಾಗಿ ಉನ್ನತೀಕರಿಸುವ ಸಂಬಂಧ, ಮೆಸ್ಕಾಂ ತನ್ನ ಒಡೆತನದಲ್ಲಿದ್ದ 5 ಎಕರೆ 63 ಸೆಂಟ್ಸ್ ಜಮೀನಿನ ಪೈಕಿ 4-00 ಎಕರೆ ಜಮೀನನ್ನು ಲೀಸ್ ಆಧಾರದ ಮೇಲೆ ನೀಡಿದ್ದು 110 ಕೆ.ವಿ. ಉಪಕೇಂದ್ರವನ್ನು ಈಗಾಗಲೆ ನಿರ್ಮಿಸಲಾಗಿದೆ. ಸದರಿ ಉಪಕೇಂದ್ರದಲ್ಲಿ ಹೊಸದಾಗಿ ಎರಡು 33 ಕೆ.ವಿ. ಬೇ ನಿರ್ಮಾಣದ ಭೂ ಸಂಪರ್ಕ ಛಾಪೆಯ ಅಳವಡಿಕೆಗಾಗಿ ಹೆಚ್ಚುವರಿಯಾಗಿ 1 ಎಕರೆ 22 ಸೆಂಟ್ಸ್ ಜಮೀನನ್ನು ನೀಡುವಂತೆ ಮೆಸ್ಕಾಂ ಗೆ ಕೋರಿಕೆ ಸಲ್ಲಿಸಲಾಗಿದೆ.

4. ಮೆಸ್ಕಾಂ ತನ್ನ ಒಡೆತನದಲ್ಲಿದ್ದ ಜಾಗದಲ್ಲಿ ವಿಭಾಗೀಯ ಉಗ್ರಾಣ ನಿರ್ಮಿಸಲು ಕಾಯ್ದಿರಿಸಿದ್ದ ಜಾಗವನ್ನು 33 ಕೆ.ವಿ. ಬೇ ನಿರ್ಮಾಣದ ಭೂ ಸಂಪರ್ಕ ಛಾಪೆಯ ಅಳವಡಿಕೆಗಾಗಿ ಕವಿಪ್ರನಿನಿಗೆ ಬಿಟ್ಟುಕೊಡುತ್ತಿದೆ. ಈ ಸಂಬಂಧ, ಮೆಸ್ಕಾಂನ ಉಗ್ರಾಣ ಹಾಗೂ ವಸತಿ ಗೃಹಗಳ ನಿರ್ಮಾಣಕ್ಕಾಗಿ ಕವಿಪ್ರನಿನಿಯ ಕೇಮಾರ್ 220 ಕೆ.ವಿ. ಉಪಕೇಂದ್ರದಲ್ಲಿ 3 ಎಕರೆ 80 ಸೆಂಟ್ಸ್ ಖಾಲಿ ಜಾಗವನ್ನು ನೀಡಲು ಕೋರಿಕೆ ಸಲ್ಲಿಸಿದೆ.

5. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಹಾಸನ ರವರು 220 ಕೆ.ವಿ. ಕೇಮಾರ್ (ಕಾರ್ಕಳ) ಉಪಕೇಂದ್ರದ ಆವರಣದಲ್ಲಿ ಖಾಲಿ ಇರುವ ಸುಮಾರು 3 ಎಕರೆ 80 ಸೆಂಟ್ಸ್ ಜಾಗವನ್ನು (ನಕ್ಷೆಯಲ್ಲಿ ಗುರುತಿಸಿದಂತೆ) ಮೆಸ್ಕಾಂನ ಉಗ್ರಾಣ ಮತ್ತು ವಸತಿ ಗೃಹಗಳ ನಿರ್ಮಾಣಕ್ಕೆ 30 ವರ್ಷಗಳ ಲೀಸ್ ಆಧಾರದ ಮೇಲೆ ನೀಡಬಹುದೆಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

6. ಕವಿಪ್ರನಿನಿ ಯ ಒಡೆತನದಲ್ಲಿದ್ದ ಒಟ್ಟಾರೆ ಆಸ್ತಿಯನ್ನು ಪ್ರಸರಣ ಆಸ್ತಿ ಹಾಗೂ ವಿತರಣಾ ಆಸ್ತಿಗಳೆಂದು ವರ್ಗೀಕರಿಸಿದ ನಂತರ, ಎಸ್ಕಾಂ ಗಳಿಗೆ ಅವಶ್ಯವಿರುವ ಕವಿಪ್ರನಿನಿ ಜಾಗವನ್ನು ಹಾಗೂ ಕವಿಪ್ರನಿನಿ ಗೆ ಅವಶ್ಯವಿರುವ ಎಸ್ಕಾಂ ಗಳ ಜಾಗಗಳನ್ನು ಲೀಸ್ ಆಧಾರದ ಮೇಲೆ ನೀಡುವ ಬಗ್ಗೆ, ದಿನಾಂಕ 29/04/2005 ರ ಆದೇಶದಲ್ಲಿ Arms-length arrangement ನ್ನು ಅನುಮೋದಿಸಲಾಗಿದೆ. ಸದರಿ ಆದೇಶದನ್ವಯ, ಕವಿಪ್ರನಿನಿ ಯಿಂದ ಎಸ್ಕಾಂಗಳಿಗೆ ಲೀಸ್ ಆಧಾರದ ಮೇಲೆ ನೀಡುವ ಜಾಗಗಳ ವಾರ್ಷಿಕ ಲೀಸ್ ಮೊತ್ತವನ್ನು ಸಾಂಕೇತಿಕವಾಗಿ ಪ್ರಚಲಿತ ಮಾರ್ಗಸೂಚಿ ಬೆಲೆಯ 0.1% ರಂತೆ ನಿಗದಿಪಡಿಸಬಹುದಾಗಿದ್ದು, ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ ಅಂದಿನ ಮಾರ್ಗಸೂಚಿ ಬೆಲೆಯನ್ವಯ ಪರಿಷ್ಕರಿಸ ಬಹುದಾಗಿರುತ್ತದೆ.

7. ಮೆಸ್ಕಾಂ ನಿಂದ ಹಾಸನ ಪ್ರಸರಣ ವಲಯ ವ್ಯಾಪ್ತಿಯಲ್ಲಿ ಕವಿಪ್ರನಿನಿ ಕಟ್ಟಡಗಳ ಬಾಡಿಗೆ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚ ಹಾಗೂ ಲೀಸ್ ಮೊತ್ತಗಳ ಬಾಕಿ ಮೊತ್ತಗಳನ್ನು ದಿನಾಂಕ 31/03/2023 ರವರೆಗೆ ಪಾವತಿಸಲಾಗಿರುವುದನ್ನು ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಹಾಸನ ರವರು ದೃಢೀಕರಿಸಿಕೊಂಡ ನಂತರ ಪ್ರಸ್ತಾಪಿಸಿರುವ ಜಾಗವನ್ನು ಮೆಸ್ಕಾಂಗೆ ಹಸ್ತಾಂತರಿಸುವ ಹಾಗೂ ಲೀಸ್ ಆಧಾರದ ಮೇಲೆ ನೀಡುವ ಜಾಗದ ಆಸ್ತಿ ತೆರಿಗೆಯನ್ನು ಮೆಸ್ಕಾಂ ವತಿಯಿಂದಲೇ ಪಾವತಿಸುವಂತೆ ಷರತ್ತು ವಿಧಿಸುವ ಬಹುದಾಗಿರುತ್ತದೆ.

8. ಈ ಹಿನ್ನೆಲೆಯಲ್ಲಿ, ಕೇಮಾರ್ (ಕಾರ್ಕಳ) 220 ಕೆ.ವಿ. ಉಪಕೇಂದ್ರದ ಆವರಣದಲ್ಲಿ (ರೇಖಾ ಚಿತ್ರದಲ್ಲಿ ಗುರುತಿಸಿರುವಂತೆ) 3 ಎಕರೆ 80 ಸೆಂಟ್ಸ್ ಖಾಲಿ ಜಾಗವನ್ನು ಮೆಸ್ಕಾಂನ ವಿಭಾಗೀಯ ಉಗ್ರಾಣ ಹಾಗೂ ವಸತಿ ಗೃಹಗಳ ನಿರ್ಮಾಣಕ್ಕಾಗಿ ಕವಿಪ್ರನಿನಿ ಮತ್ತು ಎಸ್ಕಾಂ ಗಳ ನಡುವೆ ಚಾಲ್ತಿಯಲ್ಲಿರುವ Arms-length arrangement ರನ್ವಯ, ಮೆಸ್ಕಾಂ ಗೆ 30 ವರ್ಷಗಳ ಲೀಸ್ ಆಧಾರದ ಮೇಲೆ ನೀಡುವ ಪ್ರಸ್ತಾವನೆಯನ್ನು, ಅನುಮೋದನೆಗಾಗಿ ಮಂಡಳಿಯ ಸಭೆಯ ಮುಂದೆ ಮಂಡಿಸಲಾಗಿತ್ತು.

9. ಸದರಿ ಪ್ರಸ್ತಾವನೆಯನ್ನು ದಿನಾಂಕ 19/07/2023 ರಂದು ನಡೆದ 140 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

*"**RESOLVED THAT** approval be and is hereby accorded to spare identified land measuring 3 Acre 80 Cents of KPTCL land (as per the sketches provided) at 220kV station and division office premise at Kemar (Karkala) to MESCOM for a period of 30 years as per the Arms-length arrangement between KPTCL and ESCOMs, for construction of their Divisional Stores and Quarters building subject to ascertaining that MESCOM has cleared all the outstanding dues towards rental charges, maintenance charges, water supply charges and lease amount in the jurisdiction of Transmission Zone, Hassan and*

*to obtain an undertaking from MESCOM for payment of property tax in respect of land leased to them.*

***FURTHER RESOLVED THAT** Director (Admin. & HR), KPTCL be and is hereby authorized to issue necessary orders accordingly"*

ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಪ್ರವ್ಯ(ತಾ)/ಸಿವಿಲ್(ಬಿ9)/3/2023 ವ್ಯಸ್ಥ (ಇ-46419) ದಿನಾಂಕ** 07 SEP 2023

ದಿನಾಂಕ 19/07/2023 ರಂದು ನಡೆದ 140 ನೇ ಕವಿಪ್ರನಿನಿ ಮಂಡಳಿ ನಿರ್ದೇಶಕರ ಸಭೆಯ ನಡವಳಿಯನ್ವಯ, ಕೇಮಾರ್ (ಕಾರ್ಕಳ) 220 ಕೆ.ವಿ. ಉಪಕೇಂದ್ರದ ಆವರಣದಲ್ಲಿ ಮೆಸ್ಕಾಂ ಗೆ ಈ ಕೆಳಕಂಡ ಷರತ್ತುಗಳನ್ವಯ ಜಾಗವನ್ನು ಲೀಸ್ ಆಧಾರದ ಮೇಲೆ ನೀಡಲು ಕೂಡಲೆ ಅಗತ್ಯ ಕ್ರಮಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಹಾಸನ ರವರಿಗೆ ನಿರ್ದೇಶನ ನೀಡಲಾಗಿದೆ.

1. ಕೇಮಾರ್ (ಕಾರ್ಕಳ) 220 ಕೆ.ವಿ. ಉಪಕೇಂದ್ರದ ಆವರಣದಲ್ಲಿ (ರೇಖಾ ಚಿತ್ರದಲ್ಲಿ ಗುರುತಿಸಿರುವಂತೆ) ಮೆಸ್ಕಾಂ ನ ವಿಭಾಗೀಯ ಉಗ್ರಾಣ ಹಾಗೂ ವಸತಿಗೃಹಗಳ ನಿರ್ಮಾಣಕ್ಕಾಗಿ 3 ಎಕರೆ 80 ಸೆಂಟ್ಸ್ ಖಾಲಿ ಜಾಗವನ್ನು 30 ವರ್ಷಗಳ ಲೀಸ್ ಆಧಾರದ ಮೇಲೆ ಮೆಸ್ಕಾಂ ಗೆ ಹಂಚಿಕೆ ಮಾಡುವುದು.

2. ಮೆಸ್ಕಾಂ ನಿಂದ ಹಾಸನ ಪ್ರಸರಣ ವಲಯ ವ್ಯಾಪ್ತಿಯಲ್ಲಿ ಕವಿಪ್ರನಿನಿ ಕಟ್ಟಡಗಳ ಬಾಡಿಗೆ, ನಿರ್ವಹಣೆ ವೆಚ್ಚ, ನೀರು ಸರಬರಾಜು ವೆಚ್ಚ ಹಾಗೂ ಲೀಸ್ ಮೊತ್ತಗಳ ಬಾಕಿ ಮೊತ್ತಗಳನ್ನು ದಿನಾಂಕ 31/03/2023 ರವರೆಗೆ ಪಾವತಿಸಲಾಗಿರುವುದನ್ನು ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಹಾಸನ ರವರು ದೃಢೀಕರಿಸಿಕೊಂಡ ನಂತರ ಪ್ರಸ್ತಾಪಿಸಿರುವ ಜಾಗವನ್ನು ಮೆಸ್ಕಾಂಗೆ ಹಸ್ತಾಂತರಿಸುವುದು ಹಾಗೂ ಲೀಸ್ ಆಧಾರದ ಮೇಲೆ ನೀಡುವ ಜಾಗದ ಆಸ್ತಿ ತೆರಿಗೆಯನ್ನು ಮೆಸ್ಕಾಂ ವತಿಯಿಂದಲೇ ಪಾವತಿಸುವಂತೆ ಷರತ್ತು ವಿಧಿಸುವುದು.

3. ಸದರಿ ಜಾಗವನ್ನು ಮೆಸ್ಕಾಂ ಗೆ ನೀಡುವ ಸಂಬಂಧ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿ.ಎಲ್ ಮತ್ತು ಎಸ್.ಎಸ್ ವಿಭಾಗ, ಕಾರ್ಕಳ (ಕೇಮಾರ್) ರವರು ಮೆಸ್ಕಾಂನೊಂದಿಗೆ ಲೀಸ್ ಒಪ್ಪಂದ ಮಾಡಿಕೊಳ್ಳುವುದು.

4. ಸದರಿ ಜಾಗದ ಹಾಲಿ ಮಾರ್ಗಸೂಚಿ ಬೆಲೆಯನ್ವಯ ಹಾಗೂ ಕವಿಪ್ರನಿನಿ ಮತ್ತು ಮೆಸ್ಕಾಂ ಗಳ ನಡುವೆ ಹಾಲಿ ಇರುವ Arms-length arrangement ನ ನಿಯಮಗಳಂತೆ, ವಾರ್ಷಿಕ ಲೀಸ್ ಮೊತ್ತವನ್ನು ಲೆಕ್ಕಾಚಾರ ಮಾಡಿ ಪಾವತಿಸುವಂತೆ, ಮೆಸ್ಕಾಂ ಗೆ ಸೂಚಿಸುವುದು.

6. ಸದರಿ ಲೀಸ್ ಮೊತ್ತವನ್ನು ಪ್ರತಿ 5 ವರ್ಷಗಳಿಗೊಮ್ಮೆ, ಅಂದಿನ ಮಾರ್ಗಸೂಚಿ ಬೆಲೆಯನ್ವಯ ಹಾಗೂ Arms-length arrangement ನ ನಿಯಮಗಳನ್ವಯ, ಪರಿಷ್ಕರಿಸುವುದು. ಹಾಗೂ ವಾರ್ಷಿಕ ಲೀಸ್ ಮೊತ್ತವನ್ನು, ಪ್ರತಿ ವರ್ಷ ಏಪ್ರಿಲ್ ಮಾಹೆಯ ಮೊದಲ ವಾರದಲ್ಲಿ, ಮುಂಗಡವಾಗಿ ಕಾರ್ಕಳ (ಕೇಮಾರ್), ಟಿ.ಎಲ್ ಮತ್ತು ಎಸ್.ಎಸ್ ವಿಭಾಗಕ್ಕೆ ಪಾವತಿಸುವಂತೆ ಮೆಸ್ಕಾಂ ಗೆ ಸೂಚಿಸುವುದು.

7. ಮೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗವನ್ನು, ಉದ್ದೇಶಿತ ಕಟ್ಟಡ ನಿರ್ಮಾಣಕ್ಕೆ ಮಾತ್ರ ಉಪಯೋಗಿಸುವಂತೆ ಹಾಗೂ ಬೇರೆ ಯಾವುದೆ ಉದ್ದೇಶಕ್ಕೆ ಬಳಸಬಾರದೆಂಬ, ಷರತ್ತನ್ನು ವಿಧಿಸುವುದು.

8. ಮೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಕರಾರು ಒಪ್ಪಂದ ಮಾಡಿಕೊಂಡ ದಿನದಿಂದ, ಒಂದು ವರ್ಷದ ಅವಧಿಯೊಳಗೆ, ಉದ್ದೇಶಿತ ಕಟ್ಟಡ ನಿರ್ಮಾಣಕ್ಕೆ

ಕ್ರಮಕೈಗೊಳ್ಳುವಂತೆ ತಿಳಿಸುವುದು ಇಲ್ಲವಾದ್ದಲ್ಲಿ, ಒಪ್ಪಂದದ ಕರಾರು ರದ್ದಾಗುವುದೆಂಬ ಷರತ್ತನ್ನು ವಿಧಿಸುವುದು.

9. ನಿಗಮ ಲೀಸ್ ನೀಡಲು ಅನುಮೋದಿಸಿರುವ ಜಾಗ ಒತ್ತುವರಿಯಾಗದಂತೆ ಸಂರಕ್ಷಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಲು ಮೆಸ್ಕಾಂ ಗೆ ಸೂಚಿಸುವುದು.

10. ಲೀಸ್ ಆಧಾರದ ಮೇಲೆ ಮೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಬಗ್ಗೆ, ಟಿ.ಎಲ್ ಮತ್ತು ಎಸ್.ಎಸ್ ವಿಭಾಗದ ಆಸ್ತಿ ಪುಸ್ತಕದಲ್ಲಿ, ಅಗತ್ಯ ದಾಖಲಾತಿಗಳನ್ನು ಮಾಡುವುದು.

11. ಮೆಸ್ಕಾಂ ಗೆ ನೀಡಲು ಅನುಮೋದಿಸಿರುವ ಜಾಗದ ಬಗ್ಗೆ ನಿಗಮದ ದಿನಾಂಕ 29/04/2005 ರ ಆದೇಶ ಹಾಗೂ 26/10/2006 ಸುತ್ತೋಲೆಯಲ್ಲಿ ತಿಳಿಸಿರುವ Arms-length arrangement ನ ನಿಯಮಗಳನ್ವಯ ಮುಂದಿನ ಅಗತ್ಯ ಕ್ರಮಕೈಗೊಳ್ಳುವುದು.

**"ಆದೇಶದ ಮೇರೆಗೆ"**

**ನಿರ್ದೇಶಕರು (ಆ ಮತ್ತು ಮಾ.ಸಂ)**
**ಕವಿಪ್ರನಿನಿ, ಬೆಂಗಳೂರು.**

**ಪ್ರತಿಗಳು:-**

1. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
2. ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
3. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) / (ಆಂತರಿಕ ಪರಿಶೋಧನೆ), ಕವಿಪ್ರನಿನಿ.
4. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕವಿಪ್ರನಿನಿ, ಹಾಸನ.
6. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
7. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ) - ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು.
8. ಲೆಕ್ಕ ನಿಯಂತ್ರಣಾಧಿಕಾರಿ, ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
9. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಟಿ.ಎಲ್ ಮತ್ತು ಎಸ್.ಎಸ್ ವಿಭಾಗ, ಕವಿಪ್ರನಿನಿ, ಕಾರ್ಕಳ (ಕೇಮಾರ್).
10. ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
11. ಉಪಲೆಕ್ಕ ನಿಯಂತ್ರಣಾಧಿಕಾರಿ (ಆಂತರಿಕ ಪರಿಶೋಧನೆ), ಪ್ರಸರಣ ವಲಯ, ಕವಿಪ್ರನಿನಿ, ಹಾಸನ.
12. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ) / ನಿರ್ದೇಶಕರು (ಹಣಕಾಸು) / ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
13. ಲೆಕ್ಕಾಧಿಕಾರಿ (ಕೋಢೀಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.